ನಿಮ್ಮೊಡನೆ

# ಪಂಚಾಯತ್ ಚುನಾವಣೆಯಲ್ಲಿ..

ಎಂಬತ್ತರ ದಶಕದಲ್ಲಿ ಮಂಡಲ ಪಂಚಾಯತ್ ಹೆಸರಿನಲ್ಲಿ ಪ್ರಾರಂಭಿಸಿದ ಪಕ್ಷಾಧಾರಿತ ಚುನಾವಣೆ ಗ್ರಾಮೀಣ ಪ್ರದೇಶವನ್ನು ರಾಜಕೀಯ ಪಕ್ಷಗಳ ಹೆಸರಿನಲ್ಲಿ ಒಡೆಯಿತು. ಆಗ ಉಂಟಾದ ಬಿರುಕು ಇನ್ನೂ ಮುಚ್ಚಿಲ್ಲ. ಬದಲಾಗಿ ವಿಕೃತ ರೂಪದಲ್ಲಿ ಬೆಳೆದಿದೆ. ರಾಜಕೀಯ ಪಕ್ಷಗಳು ಭಾಗವಹಿಸುವ ಯಾವುದೇ ಚುನಾವಣೆಗೂ ಕಡಿಮೆ ಇಲ್ಲದಂತೆ ಖರ್ಚು ವೆಚ್ಚ ನಡೆಸಬೇಕಾದ ಸ್ಥಿತಿ ಈ ಪಕ್ಷರಹಿತ ಚುನಾವಣೆಗೂ ಬಂದಿದೆ.

ಗ್ರಾಮರಾಜ್ಯ ಪರಿಕಲ್ಪನೆ ಪ್ರಜಾಸತ್ತೆಯ ಬೇರು. ಬೇರು ಭದ್ರವಾಗಿದ್ದರೆ ಮೇಲ್ಭಾಗವೂ ಸದೃಢವಾಗಿರುತ್ತದೆ. ನಮ್ಮಲ್ಲಿಯೇ ಒಬ್ಬರನ್ನು ಮುಂದೆ ನಿಲ್ಲಿಸಿ ಅವರಿಂದ ನಮಗೆ ಬೇಕಾಗಿರುವುದನ್ನು ಒಟ್ಟಾಗಿ ಪಡೆದುಕೊಳ್ಳುವ ನಾಗರಿಕ ಆಡಳಿತ ವ್ಯವಸ್ಥೆಗೆ ಸಾಂಸ್ಥಿಕ ರೂಪ ಕೊಟ್ಟಿರುವ ಗ್ರಾಮ ಪಂಚಾಯತ್ ಇದೀಗ ಕಾಯಕಲ್ಪ ಪಡೆಯುವ ಸನ್ನಾಹದಲ್ಲಿದೆ. ಪ್ರಾಚೀನ ನಾಗರಿಕತೆಗಳಲ್ಲಿ ಸಣ್ಣ ಸಣ್ಣ ಘಟಕಗಳಲ್ಲಿ ಯಶಸ್ವಿಯಾಗಿ ಆಡಳಿತ ವ್ಯವಸ್ಥೆ ಇದ್ದುದನ್ನು ನೆನಪಿಗೆ ತರುವ ಗ್ರಾಮಾಡಳಿತ ವ್ಯವಸ್ಥೆ ದುರಾಡಳಿತ, ದುಷ್ಟಕೂಟ, ದುರ್ವರ್ತನೆ, ದುರಾಚಾರಗಳನ್ನು ಮೈಗೂಡಿಸಿಕೊಳ್ಳುತ್ತಿರುವ ಅಪಾಯದ ಮುನ್ಸೂಚನೆ ನೀಡುತ್ತಿವೆ– ಈಗ ನಡೆದಿರುವ ಗ್ರಾಮ ಪಂಚಾಯತ್ ಚುನಾವಣೆ ಕುರಿತಾದ ವರದಿಗಳು.


ಚುನಾವಣೆ ರಾಜಕೀಯ ಆವರಿಸಿದ ಎಲ್ಲ ರೀತಿಯ ಅಕ್ರಮ ಮಾರ್ಗಗಳೂ ಇಲ್ಲಿ ಅನಾವರಣಗೊಳ್ಳುತ್ತಿವೆ. ಜಾತಿ, ಹಣ, ಪ್ರತಿಷ್ಠೆ, ಸಂಖ್ಯಾಬಲಗಳೇ ಜನಪ್ರತಿನಿಧಿಯ ಆಯ್ಕೆಗೆ ಮಾನದಂಡ ಎನಿಸುತ್ತಿದೆ. ಪ್ರಜಾಸತ್ತೆಯ ಕೆಳಹಂತದ ಆಡಳಿತ ವ್ಯವಸ್ಥೆಯಲ್ಲಿ ರಾಜಕೀಯ ಸಿದ್ಧಾಂತದ ಅನುಸರಣೆಗಿಂತ ಮೂಲಸೌಕರ್ಯಗಳನ್ನು ಕಲ್ಪಿಸುವುದಷ್ಟೆ ಮುಖ್ಯವಾಗಬೇಕು. ಅಲ್ಲಿಗೆ ಪಕ್ಷಗಳ ರಾಜಕೀಯ ಸಿದ್ಧಾಂತವಾಗಲೀ, ತತ್ವಗಳಾಗಲೀ ಆಧಾರವಾಗುವುದಕ್ಕಿಂತ, ಅಗತ್ಯ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಆದ್ಯತೆ ಇರಬೇಕು. ಶುದ್ಧವಾದ ಕುಡಿಯುವ ನೀರು, ಓಡಾಡಲು ಹಾದಿ, ಸಂಪರ್ಕಕ್ಕೆ ಸರ್ವ ಋತು ರಸ್ತೆ, ಸಮುದಾಯ ಚಟುವಟಿಕೆಗಳಿಗೆ ಅವಕಾಶ, ಮಕ್ಕಳಿಗೆ ಬಾಲವಾಡಿ, ಪ್ರಾಥಮಿಕ ಆರೋಗ್ಯ ರಕ್ಷಣೆಯ ಸೌಕರ್ಯ ಮೊದಲಾದವುಗಳನ್ನು ಒದಗಿಸುವುದು ಸ್ಥಳೀಯ ಆಡಳಿತದ ಕರ್ತವ್ಯ. ಆದ್ದರಿಂದ ಅದರ ನಿರ್ವಹಣೆಗೆ ಪಕ್ಷ ಸಿದ್ಧಾಂತಗಳಿಗಿಂತ ನಿಷ್ಕಲ್ಮಶ ಮನಸ್ಸಿನ ಕಾರ್ಯಕರ್ತರು ಬೇಕು ಎಂದೇ ಗ್ರಾಮ ಪಂಚಾಯತ್ ಚುನಾವಣೆಯನ್ನು ರಾಜಕೀಯ ಪಕ್ಷಗಳ ಹೆಸರಲ್ಲಿ ನಡೆಸುತ್ತಿಲ್ಲ. ಪಕ್ಷ ರಾಜಕಾರಣ ಬೇರುಮಟ್ಟದ ಆಡಳಿತ ಹಂತದಲ್ಲಿಯೂ ಬಂದರೆ ಅಭಿವೃದ್ಧಿ ಕಾರ್ಯಗಳಿಗೆ ರಾಜಕೀಯ ಬಣ್ಣ ಬರಬಹುದು ಎಂಬ ಶಂಕೆಯಿಂದ ಮಾಡಲಾದ ಈ ಬದಲಾವಣೆ ಈಗ ಮರೀಚಿಕೆ ಆಗುತ್ತಿದೆ.

ಗ್ರಾಮ ಪಂಚಾಯತ್ ವ್ಯವಸ್ಥೆ ಕರ್ನಾಟಕದಲ್ಲಿ ಹೊಸದಲ್ಲ. ಸ್ವಾತಂತ್ರ್ಯ ಪೂರ್ವದಿಂದಲೂ ಗ್ರಾಮಗಳ ಹಂತದಲ್ಲಿ ಸ್ಥಳೀಯ ಜನ ತಮ್ಮ ಅವಶ್ಯಕತೆಗಳನ್ನು ಸರ್ಕಾರದ ಪ್ರತಿನಿಧಿಗಳಲ್ಲಿ ನಿವೇದಿಸಿಕೊಳ್ಳಲು ಅವಕಾಶವಿತ್ತು. ಸ್ವಾತಂತ್ರ್ಯಾನಂತರ ಗ್ರಾಮ ಪಂಚಾಯತ್‌ಗಳು ಅಸ್ತಿತ್ವಕ್ಕೆ ಬಂದು ಚುನಾಯಿತ ಪ್ರತಿನಿಧಿಗಳ ಮಾತು ಆಡಳಿತದಲ್ಲಿ ಕೇಳಿಸುವಂತಾಯಿತು. ಕಳೆದ ಶತಮಾನದ ಎಂಬತ್ತರ ದಶಕದಲ್ಲಿ ಮಂಡಲ ಪಂಚಾಯತ್ ಹೆಸರಿನಲ್ಲಿ ಪ್ರಾರಂಭಿಸಿದ ಪಕ್ಷಾಧಾರಿತ ಚುನಾವಣೆ ಗ್ರಾಮೀಣ ಪ್ರದೇಶವನ್ನು ರಾಜಕೀಯ ಪಕ್ಷಗಳ ಹೆಸರಿನಲ್ಲಿ ಒಡೆಯಿತು. ಆಗ ಉಂಟಾದ ಬಿರುಕು ಇನ್ನೂ ಮುಚ್ಚಿಲ್ಲ. ಬದಲಾಗಿ ವಿಕೃತ ರೂಪದಲ್ಲಿ ಬೆಳೆದಿದೆ. ರಾಜಕೀಯ ಪಕ್ಷಗಳು ಭಾಗವಹಿಸುವ ಯಾವುದೇ ಚುನಾವಣೆಗೂ ಕಡಿಮೆ ಇಲ್ಲದಂತೆ ಖರ್ಚು ವೆಚ್ಚ ನಡೆಸಬೇಕಾದ ಸ್ಥಿತಿ ಈ ಪಕ್ಷರಹಿತ ಚುನಾವಣೆಗೂ ಬಂದಿದೆ.

ಗ್ರಾಮ ಪಂಚಾಯತ್‌ಗಳಿಗೆ ಹೆಚ್ಚಿನ ಹೊಣೆ ಮತ್ತು ಅದನ್ನು ನಿರ್ವಹಿಸಲು ಹೆಚ್ಚಿನ ಅನುದಾನ ಕೊಡುವ ವ್ಯವಸ್ಥೆ ಜಾರಿಗೆ ಬಂದ ಮೇಲೆ ಇಲ್ಲಿ ಆಡಳಿತದಲ್ಲಿ ಭಾಗವಹಿಸಲು ಪೈಪೋಟಿ ತೀವ್ರವಾಗಿದೆ. ಕೇಂದ್ರ ಸರ್ಕಾರದ ಅನುದಾನದ ಹಣ ನೇರವಾಗಿ ಬರುವ ಕ್ರಮವೂ ಇದಕ್ಕೆ ಒತ್ತಾಸೆಯಾಗಿದೆ. ಹಣ ಹರಿಯುತ್ತಿದೆ ಎಂದ ಮೇಲೆ ಅದನ್ನು ಪಡೆಯುವುದಕ್ಕೆ ನಾನಾ ಅವತಾರಗಳನ್ನು ತಾಳುವ 'ಸೇವಾಕಾಂಕ್ಷಿ'ಗಳಿಗೆ ಈಗಿನ ವ್ಯವಸ್ಥೆಯಲ್ಲಿ ಬರವಿಲ್ಲ. ಅದರ ಪರಿಣಾಮವೇ ಅಭಿವೃದ್ಧಿಯ ಹೆಸರಿನಲ್ಲಿ ರಾಜಕೀಯ ಪಕ್ಷಗಳು ಜನಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಿರುವ ಅಕ್ರಮ ವಿಧಾನ. ಚುನಾವಣೆ ನಡೆದರೆ ಅದಕ್ಕಾಗಿ ಲಕ್ಷಗಟ್ಟಲೆ ಖರ್ಚು ಮಾಡಬೇಕಿರುವುದರಿಂದ ಅದನ್ನು ಅಭಿವೃದ್ಧಿ ಕೆಲಸಕ್ಕಾಗಿ ಕೊಟ್ಟು ಸದಸ್ಯತ್ವ ಖರೀದಿಸಬಹುದೆಂಬ ಹೊಸಬಗೆಯ ಅನೈತಿಕ ತಂತ್ರಗಳು ವರದಿಯಾಗಿವೆ. ಹಳ್ಳಿಗಳಲ್ಲಿ ಸ್ಪರ್ಧೆ ನಡೆಸಿ ಸಾಮರಸ್ಯ ಕೆಡಿಸಿಕೊಳ್ಳುವುದಕ್ಕಿಂತ ಆಕಾಂಕ್ಷಿಗಳನ್ನೂ, ಉತ್ಸಾಹಿಗಳನ್ನೂ ಅವಿರೋಧವಾಗಿ ಆಯ್ಕೆ ಮಾಡಬಹುದೆಂಬ ಹುನ್ನಾರಗಳೂ ಕೇಳಿಬಂದಿವೆ. ಇಂಥ ತಂತ್ರಗಳ ಹಿಂದೆ ಗ್ರಾಮಾಭಿವೃದ್ಧಿಯ ನೈಜ ಕಾಳಜಿ ಇರುವುದಿಲ್ಲ. ಅಧಿಕಾರ ಸ್ಥಾನದ ಮೂಲಕ ಹಣ ಹೊಡೆಯುವ ಕುತಂತ್ರವೇ ಪ್ರಧಾನವಾಗಿರುತ್ತದೆ. ಈ ಪ್ರವೃತ್ತಿ ಅತ್ಯಂತ ಖಂಡನೀಯ.

ಕೆಳಹಂತದ ಆಡಳಿತ ವ್ಯವಸ್ಥೆಯಲ್ಲಿ ಪ್ರತಿ ಪ್ರಜೆಯೂ ಪಾಲುದಾರನಾಗಿ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕೆಂಬ ಉದಾತ್ತ ಆಶಯದ ಗ್ರಾಮ ಪಂಚಾಯತ್ ವ್ಯವಸ್ಥೆ ಬಲಗೊಳ್ಳುವುದು ಪ್ರಜಾಸತ್ತೆಯ ಉಳಿವಿನ ದೃಷ್ಟಿಯಿಂದ ಅತ್ಯವಶ್ಯಕ.

■ ಲಕ್ಷ್ಮಣ ಕೊಡಸೆ



ಶಿಲ್ಪಾ